**ದಿ: 18-11-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿಗಳ ಪರ ವಕೀಲರಾದ ಶ್ರೀ. ಚಿದಾನಂದ ರಾವ್ ಪಿರವರಿಂದ**

ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ನಾನು ದೂರವಾಣಿ ಇಲಾಖೆಯಲ್ಲಿ ಕೆಲಸ ಮಾಡಿ, ಈಗ 4 ವರ್ಷಗಳ ಹಿಂದೆ ನಿವೃತ್ತಿ ಆಗಿರುತ್ತೇನೆ. ಈಗ ನಾನು ಕೋಣೆಯಲ್ಲಿ ವಾಸ ಮಾಡುತ್ತಿದ್ದೇನೆ. ಪ್ರತಿವಾದಿಗಳು ಸಲ್ಲಿಸಿರುವ ಲಿಖಿತ ತಕರಾರನ್ನು ನಾನು ಓದಿದ್ದು, ನನಗೆ ಪಾರ್ಶ್ವವಾಯು ಬಡಿದಿದ್ದರಿಂದ ಈಗ ನೆನಪಿರುವುದಿಲ್ಲ.

ದಾವಾ ಆಸ್ತಿಗಳ ವಿಸ್ತೀರ್ಣ ಒಟ್ಟು 31 ಸೆಂಟ್ಸ್ ಇರುತ್ತದೆ. 2 ದಾವಾ ಆಸ್ತಿಗಳಿದ್ದು, ಒಂದರ ಪಕ್ಕ ಒಂದು ಇರುತ್ತವೆ, ಅವುಗಳ ಮಧ್ಯ ಕಾಂಪೌಂಡ ಇರುವುದಿಲ್ಲ. 2 ದಾವಾ ಆಸ್ತಿಗಳಲ್ಲಿ 16 ಸೆಂಟ್ಸನಲ್ಲಿ ಒಂದು ಮನೆ ಇರುತ್ತದೆ. ಸದರಿ ಮನೆಯ ಸಂ.8/84 ಇರುತ್ತದೆ. ಸದರಿ ಮನೆಯ ಮುನಿಸಿಪಲ್ ನಮ್ಮ ತಂದೆಯಾದ ಪಂಜುರವರ ಹೆಸರಿನಲ್ಲಿ ಇರುತ್ತದೆ. ದಾವಾ ಆಸ್ತಿಗಳ ಉತ್ತರ ದಿಕ್ಕಿನಲ್ಲಿ ಪುರಸಭೆಯವರು ಬೇರೆಯವರಿಗೆ ನೀಡಿರುವ ಮನೆಗಳು, ಪೂರ್ವ ದಿಕ್ಕಿನಲ್ಲಿ ಚಾಲಕರಾದ ಅಣ್ಣಯ್ಯನ ಮನೆ, ಪಶ್ಚಿಮ ಮತ್ತು ದಕ್ಷಿಣ ದಿಕ್ಕುಗಳನ್ನು ನಮ್ಮ ಜಾತಿಯವರ ಮನೆಗಳು ಇರುತ್ತವೆ.

ದಾವಾ ಆಸ್ತಿಗಳನ್ನು ನಮ್ಮ ತಂದೆಯಾದ ಪಂಜುರವರು ಸುಮಾರು 60 ವರ್ಷಗಳ ಹಿಂದೆ ನಮ್ಮ ಜಾತಿಯವರಿಂದ ಖರೀದಿ ಮಾಡಿರುತ್ತಾರೆ. ಕ್ರಯ ಪತ್ರವನ್ನು ಹಾಜರು ಮಾಡಿರುವುದಿಲ್ಲ. ಕಾರಣ ನಮ್ಮ ತಂದೆಯವರು ಎಲ್ಲಿ ಇಟ್ಟಿದ್ದರು ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳನ್ನು ಮಾರಾಟ ಮಾಡಿದವರ ಹೆಸರುಗಳು ಗೊತ್ತಿಲ್ಲ. ದಾವಾ ಆಸ್ತಿಗಳನ್ನು ನಮ್ಮ ತಂದೆಗೆ ಮಾರಾಟ ಮಾಡಿದವರಿಗೆ ಅವುಗಳು ಸರ್ಕಾರದಿಂದ ಬಂದಿರುತ್ತವೆ. ನಮ್ಮ ತಂದೆ ಹಾಗೂ ನಮ್ಮ ತಂದೆಗೆ ಮಾರಾಟ ಮಾಡಿದವರು ಪರಿಶಿಷ್ಟ ಜಾತಿಗೆ ಸೇರಿರುತ್ತೇವೆ.

ನಮ್ಮ ತಂದೆಯಾದ ಪಂಜುರವರು ದಾವಾ ಆಸ್ತಿಗಳನ್ನು ನನ್ನ ಪರವಾಗಿ ನೊಂದಾಯಿತ ದಾನ ಪತ್ರದ ಮುಖಾಂತರ ದಾನ ಮಾಡಿರುತ್ತಾರೆ. ದಾನ ಪತ್ರ ಕಾನೂನುಬಾಹಿರ ಎಂದು ಕುಂದಾಪುರದ ಉಪವಿಭಾಗಾಧಿಕಾರಿಗಳು ಆದೇಶ ಮಾಡಿದ್ದು, ಅದನ್ನು ಉಡುಪಿಯ ಜಿಲ್ಲಾಧಿಕಾರಿಗಳು ಸ್ಥಿತಿಕರಿಸಿರುತ್ತಾರೆ. ಉಪವಿಭಾಗಾಧಿಕಾರಿಗಳ ಆದೇಶವನ್ನು ಹಾಜರು ಮಾಡಿದ್ದೆನೋ ಅಥವಾ ಇಲ್ಲವೋ ನನಗೆ ನೆನಪಿಲ್ಲ. ಉಪವಿಭಾಗಾಧಿಕಾರಿಗಳ ಮುಂದೆ ನಾನು ಪಕ್ಷಕಾರನಿದ್ದೆ ಎಂದರೆ ಸರಿ. ಉಪವಿಭಾಗಾಧಿಕಾರಿಗಳ ಮುಂದೆ ಮೇಲ್ಮನವಿಯನ್ನು ಪ್ರತಿವಾದಿಗಳು ಸಲ್ಲಿಸಿದ್ದರು. ಜಿಲ್ಲಾಧಿಕಾರಿಗಳ ಆದೇಶವನ್ನು ಪ್ರಶ್ನಿಸಿದ್ದೇನೋ ಅಥವಾ ಇಲ್ಲವೋ ಎನ್ನುವುದು ನೆನಪಿಲ್ಲ.

ನಾನು ಕುಂದಾಪುರದ ದಿವಾಣಿ ನ್ಯಾಯಾಲಯದಲ್ಲಿ ಪ್ರದಿವಾದಿಗಳ ವಿರುದ್ಧ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಅಸಲು ದಾವಾ ಸಂಖ್ಯೆ 75/2000 ನ್ನು ಸ್ವಾಧೀನಕ್ಕಾಗಿ ಸಲ್ಲಿಸಿದ್ದೆ. ಸದರಿ ದಾವೆ ಡಿಕ್ರಿಯಾಗಿತ್ತು. ಅದರ ವಿರುದ್ಧ ಪ್ರತಿವಾದಿಗಳ ಮೇಲ್ಮನವಿ ಸಂಖ್ಯೆ 65/2005 ನ್ನು ಸಲ್ಲಿಸಿದ್ದರು. ಸದರಿ ಮೇಲ್ಮನವಿಯಲ್ಲಿ ಕೆಳ ನ್ಯಾಯಾಲಯ ಮಾಡಿದ ತೀರ್ಪನ್ನು ತೆಗೆದು ಹಾಕಿರುತ್ತಾರೆ. ಮೇಲ್ಮನವಿ ಸಂಖ್ಯೆ 65/2005 ರ ವಿರುದ್ಧ ನಾವು 2ನೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ.

ಪ್ರತಿವಾದಿಗಳು ಕಳೆದ 25 ವರ್ಷಗಳಿಂದ ದಾವಾ ಆಸ್ತಿಗಳ ಸ್ವಾಧೀನದಲ್ಲಿರುತ್ತಾರೆ. ಪ್ರತಿವಾದಿಗಳು ಮೃತ ಪಂಜುವಿನ ಹೆಂಡತಿ ಮತ್ತು ಮಕ್ಕಳು ಎಂದು ಯಾವಾಗಿನಿಂದ ಸಾಧನೆ ಮಾಡುತ್ತಿದ್ದಾರೆ ಎನ್ನುವುದು ಈಗ ನೆನಪಿಲ್ಲ.

ನಿಶಾನೆ ಪಿ-14 ರ ಪ್ರಕಾರ ಹಾಜರು ಮಾಡಿರುವ ಸಂತತಿ ನಕಾಶೆಯನ್ನು ತಯಾರಿಸಲು ಯಾರು ಅರ್ಜಿ ಸಲ್ಲಿಸಿದ್ದಾರೆ ಮತ್ತು ಯಾರು ಪ್ರಮಾಣ ಪತ್ರ ನೀಡಿದ್ದರು ಎನ್ನುವುದು ಈಗ ನೆನಪಿಲ್ಲ. ನಿಶಾನೆ ಪಿ-14 ನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ನೋಟಿಸು ನೀಡಿರುವುದಿಲ್ಲ.

ನಮ್ಮ ತಂದೆ ಯಾವಾಗ ಮರಣ ಹೊಂದಿದರು ಎನ್ನುವುದು ಈಗ ನೆನಪಿಲ್ಲ. ಪಂಜುರವರು ನನ್ನ ಪರವಾಗಿ ದಾನ ಪತ್ರ ಬರೆದುಕೊಟ್ಟ ನಂತರ ನಾನು ಮತ್ತು ಇತರೆ ವಾದಿಗಳ ಪರವಾಗಿ ಮರಣ ಶಾಸನ ಬರೆದಿರುತ್ತಾರೆ. ಅದನ್ನು ಹಾಜರುಮಾಡಿರುವುದಿಲ್ಲ ಎಂದರೆ ಸರಿ.

1ನೇ ಪ್ರತಿವಾದಿಯಾದ ಲಕ್ಷ್ಮೀರವರು ಪಂಜುವಿನ ಹೆಂಡತಿ ಎಂದರೆ ನನಗೆ ಗೊತ್ತಿಲ್ಲ. 2 ರಿಂದ 7 ನೇ ಪ್ರತಿವಾದಿಗಳು ಪಂಜು ಮತ್ತು 1ನೇ ಪ್ರತಿವಾದಿಯ ಮಕ್ಕಳು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳಲ್ಲಿ ಪ್ರತಿವಾದಿಗಳಿಗೆ ಕೂಡ ಹಕ್ಕಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ಪ್ರತಿವಾದಿಗಳಿಗೆ ಇರುವ ಹಕ್ಕನ್ನು ಎತ್ತಿ ಹಾಕಲು ನಾನು ಮತ್ತು ಇತರೆ ವಾದಿಗಳು ಸೇರಿ ಸುಳ್ಳು ದಾವೆ ಸಲ್ಲಿಸಿದ್ದೇವೆ ಮತ್ತು ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ** : ಇಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು**)**

**ಓ ಹೇ ಕೇ ಸ ಇ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಕುಂದಾಪುರ**